**ಕರ್ನಾಟಕ ವಿಧಾನ ಪರಿಷತ್ತು**
**ನೂರ ಐವತ್ತೊಂದನೆಯ ಅಧಿವೇಶನ**

# ಕರ್ನಾಟಕ ಸಾರ್ವಜನಿಕ ಪರೀಕ್ಷೆ (ನೇಮಕಾತಿಯಲ್ಲಿನ ಭ್ರಷ್ಟಾಚಾರ ಮತ್ತು ಅನುಚಿತ ವಿಧಾನಗಳ ಪ್ರತಿಬಂಧಕ ಕ್ರಮಗಳು) ವಿಧೇಯಕ, 2023

**(2023ರ ವಿಧಾನಸಭೆಯ ವಿಧೇಯಕ ಸಂಖ್ಯೆ-21)**

**(ಕರ್ನಾಟಕ ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿ)**

ಸ್ವಾಯತ್ತ ಸಂಸ್ಥೆಗಳು, ಪ್ರಾಧಿಕಾರಗಳು, ಮಂಡಳಿಗಳು ಅಥವಾ ನಿಗಮಗಳನ್ನು ಒಳಗೊಂಡಂತೆ ಕರ್ನಾಟಕ ರಾಜ್ಯ ಸರ್ಕಾರದಲ್ಲಿನ ಅಥವಾ ಅದರಡಿಯಲ್ಲಿನ ಯಾವುದೇ ಹುದ್ದೆಗೆ ನೇಮಕಾತಿಯ ಉದ್ದೇಶಕ್ಕಾಗಿ ನಡೆಸುವ ಸಾರ್ವಜನಿಕ ಪರೀಕ್ಷೆಗಳಲ್ಲಿ ಅನುಚಿತ ಹಾಗೂ ಭ್ರಷ್ಟಾಚಾರದ ವಿಧಾನಗಳ ಬಳಕೆಯನ್ನು ಮತ್ತು ಪ್ರಶ್ನೆ ಪತ್ರಿಕೆಗಳ ಸೋರಿಕೆಯನ್ನು ತಡೆಗಟ್ಟಲು ಕಟ್ಟುನಿಟ್ಟಿನ ಮತ್ತು ಪರಿಣಾಮಕಾರಿ ಕ್ರಮಗಳಿಗಾಗಿ ಉಪಬಂಧ ಕಲ್ಪಿಸಲು ಹಾಗೂ ಅಂಥ ಅಪರಾಧಗಳ ಅಧಿವಿಚಾರಣೆಗಾಗಿ ಗೊತ್ತುಪಡಿಸಿದ ನ್ಯಾಯಾಲಯಗಳಿಗಾಗಿ ಉಪಬಂಧ ಕಲ್ಪಿಸುವ ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಸ್ವಾಯತ್ತ ಸಂಸ್ಥೆಗಳು, ಪ್ರಾಧಿಕಾರಗಳು, ಮಂಡಳಿಗಳು ಅಥವಾ ನಿಗಮಗಳನ್ನು ಒಳಗೊಂಡಂತೆ ಕರ್ನಾಟಕ ರಾಜ್ಯ ಸರ್ಕಾರದಲ್ಲಿನ ಅಥವಾ ಅದರಡಿಯಲ್ಲಿನ ಯಾವುದೇ ಹುದ್ದೆಗೆ ನೇಮಕಾತಿಯ ಉದ್ದೇಶಕ್ಕಾಗಿ ನಡೆಸುವ ಸಾರ್ವಜನಿಕ ಪರೀಕ್ಷೆಗಳಲ್ಲಿ ಅನುಚಿತ ಹಾಗೂ ಭ್ರಷ್ಟಾಚಾರದ ವಿಧಾನಗಳ ಬಳಕೆಯನ್ನು ಮತ್ತು ಪ್ರಶ್ನೆ ಪತ್ರಿಕೆಗಳ ಸೋರಿಕೆಯನ್ನು ತಡೆಗಟ್ಟಲು ಕಟ್ಟುನಿಟ್ಟಿನ ಮತ್ತು ಪರಿಣಾಮಕಾರಿ ಕ್ರಮಗಳಿಗಾಗಿ ಹಾಗೂ ಅಂಥ ಅಪರಾಧಗಳ ಅಧಿವಿಚಾರಣೆಗಾಗಿ ಗೊತ್ತುಪಡಿಸಿದ ನ್ಯಾಯಾಲಯಗಳಿಗಾಗಿ ಉಪಬಂಧ ಕಲ್ಪಿಸುವುದು ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವುದು ಅವಶ್ಯಕವೆಂದು ಪರಿಗಣಿಸಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸಾರ್ವಜನಿಕ ಪರೀಕ್ಷೆ (ನೇಮಕಾತಿಯಲ್ಲಿನ ಭ್ರಷ್ಟಾಚಾರ ಮತ್ತು ಅನುಚಿತ ವಿಧಾನಗಳ ಪ್ರತಿಬಂಧಕ ಕ್ರಮಗಳು) ಅಧಿನಿಯಮ, 2023 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಅಧಿಸೂಚನೆ ಮೂಲಕ ಸರ್ಕಾರಿ ರಾಜ್ಯಪತ್ರದಲ್ಲಿ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.-** (1) ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಸಾರ್ವಜನಿಕ ಪರೀಕ್ಷೆಗಳ ನಡೆಸುವಿಕೆ" ಎಂಬುದು, ಪ್ರಶ್ನೆ ಪತ್ರಿಕೆಗಳ, ಉತ್ತರ ಪತ್ರಿಕೆಗಳ, ಓಎಂಆರ್ ಶೀಟುಗಳ ಮತ್ತು ಫಲಿತಾಂಶ ಪಟ್ಟಿಗಳ ಸಿದ್ಧತೆ, ಮುದ್ರಣ, ಮೇಲ್ವಿಚಾರಣೆ, ಕೋಡಿಂಗ್, ಪರಿಷ್ಕರಣೆ, ಶೇಖರಣೆ,

ಸಾಗಣೆ, ವಿತರಣೆ ಮತ್ತು ಸಂಗ್ರಹಣೆ, ಮೌಲ್ಯಮಾಪನ, ಫಲಿತಾಂಶದ ಘೋಷಣೆ ಇತ್ಯಾದಿಗಳನ್ನು ಒಳಗೊಳ್ಳುವುದು;

(ಬಿ) "ಪರೀಕ್ಷಾ ಪ್ರಾಧಿಕಾರ" ಎಂದರೆ ಅನುಸೂಚಿ-I ರಲ್ಲಿ ನಿರ್ದಿಷ್ಟಪಡಿಸಲಾದಂತೆ ಒಂದು ಪರೀಕ್ಷಾ ಪ್ರಾಧಿಕಾರ;

(ಸಿ) "ಪರೀಕ್ಷಾ ಕೇಂದ್ರ" ಎಂದರೆ ಸಾರ್ವಜನಿಕ ಪರೀಕ್ಷೆಯನ್ನು ನಡೆಸುವುದಕ್ಕಾಗಿ ನಿಗದಿಪಡಿಸಲಾದ ಅಥವಾ ಬಳಸಲಾದ ಯಾವುದೇ ಸಂಸ್ಥೆ ಅಥವಾ ಅದರ ಭಾಗ ಅಥವಾ ಯಾವುದೇ ಇತರ ಸ್ಥಳ ಹಾಗೂ ಅದಕ್ಕೆ ಹೊಂದಿಕೊಂಡ ಸಂಪೂರ್ಣ ಆವರಣಗಳನ್ನು ಒಳಗೊಳ್ಳುತ್ತದೆ;

(ಡಿ) "ಪರೀಕ್ಷಾರ್ಥಿ" ಎಂದರೆ ಸಾರ್ವಜನಿಕ ಪರೀಕ್ಷೆಯಲ್ಲಿ ಹಾಜರಾಗಲು ಸಂಬಂಧಪಟ್ಟ ಪ್ರಾಧಿಕಾರವು ಅನುಮತಿ ನೀಡಲಾದ ವ್ಯಕ್ತಿ, ಮತ್ತು ಆತನ ಪರವಾಗಿ ಸಾರ್ವಜನಿಕ ಪರೀಕ್ಷೆಯಲ್ಲಿ ಲಿಪಿಕಾರನಾಗಿ ಕಾರ್ಯನಿರ್ವಹಿಸಲು ಅಧಿಕೃತಗೊಳಿಸಿದ ವ್ಯಕ್ತಿಯನ್ನು ಒಳಗೊಳ್ಳುತ್ತದೆ;

(ಇ) "ಸಾರ್ವಜನಿಕ ಪರೀಕ್ಷೆ" ಎಂದರೆ ಅನುಸೂಚಿ-IIರಲ್ಲಿ ನಿರ್ದಿಷ್ಟಪಡಿಸಿದಂತೆ ಸ್ವಾಯತ್ತ ಸಂಸ್ಥೆಗಳು, ಪ್ರಾಧಿಕಾರಗಳು, ಮಂಡಳಿಗಳು ಅಥವಾ ನಿಗಮಗಳೂ ಸೇರಿದಂತೆ ರಾಜ್ಯ ಸರ್ಕಾರದ ಅಡಿಯಲ್ಲಿನ ಯಾವುದೇ ಹುದ್ದೆಗೆ ನೇಮಕಾತಿ ಉದ್ದೇಶಕ್ಕಾಗಿನ ಪರೀಕ್ಷೆ;

(ಎಫ್) "ಅನುಚಿತ ವಿಧಾನಗಳು" ಎಂದರೆ,-

(i) ಪರೀಕ್ಷಾರ್ಥಿಯ ಸಂಬಂಧದಲ್ಲಿ, ಸಾರ್ವಜನಿಕ ಪರೀಕ್ಷೆಯಲ್ಲಿ ಪರೀಕ್ಷಾರ್ಥಿಯು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾರೇ ವ್ಯಕ್ತಿ ಅಥವಾ ಗುಂಪಿನಿಂದ ಅಥವಾ ಯಾವುದೇ ಲಿಖಿತ, ದಾಖಲಿತ, ನಕಲಿತ, ಅಥವಾ ಮುದ್ರಿತ ಸಾಮಗ್ರಿಯ ಯಾವುದೇ ಇತರ ರೂಪದಲ್ಲಿ ಅನಧಿಕೃತವಾಗಿ ಸಹಾಯವನ್ನು ಪಡೆಯುವುದು, ಅಥವಾ ಯಾವುದೇ ಅನಧಿಕೃತ ವಿದ್ಯುನ್ಮಾನ ಅಥವಾ ಯಾಂತ್ರಿಕ ಸಾಧನ ಅಥವಾ ಉಪಕರಣವನ್ನು ಬಳಸುವುದು;

(ii) ಪರೀಕ್ಷಾರ್ಥಿಯೂ ಸೇರಿದಂತೆ ಯಾರೇ ವ್ಯಕ್ತಿಯ ಸಂಬಂಧದಲ್ಲಿ, ಇನ್ನೊಬ್ಬ ವ್ಯಕ್ತಿಯಂತೆ ನಟಿಸುವುದು ಅಥವಾ ಪ್ರಶ್ನೆ ಪತ್ರಿಕೆಯನ್ನು ಸೋರಿಕೆ ಮಾಡುವುದು ಅಥವಾ ಸೋರಿಕೆ ಮಾಡಲು ಪ್ರಯತ್ನಿಸುವುದು ಅಥವಾ ಸೋರಿಕೆ ಮಾಡಲು ಸಂಚು ರೂಪಿಸುವುದು ಅಥವಾ ಪ್ರಶ್ನೆ ಪತ್ರಿಕೆಯನ್ನು ಅನಧಿಕೃತವಾಗಿ ಸಂಗ್ರಹಿಸುವುದು, ಸಂಗ್ರಹಿಸಲು ಪ್ರಯತ್ನಿಸುವುದು ಅಥವಾ ಸ್ವಾಧೀನ ಪಡಿಸಿಕೊಳ್ಳುವುದು ಅಥವಾ ಸ್ವಾಧೀನ ಪಡಿಸಿಕೊಳ್ಳಲು ಪ್ರಯತ್ನಿಸುವುದು ಅಥವಾ ಅನಧಿಕೃತ ರೀತಿಯಲ್ಲಿ ಪ್ರಶ್ನೆ ಪತ್ರಿಕೆಯನ್ನು ಬಿಡಿಸುವುದು ಅಥವಾ ಬಿಡಿಸಲು ಪ್ರಯತ್ನಿಸುವುದು ಅಥವಾ ಬಿಡಿಸಲು ನೆರವನ್ನು ಕೋರುವುದು ಅಥವಾ ಸಾರ್ವಜನಿಕ ಪರೀಕ್ಷೆಯಲ್ಲಿ ಪರೀಕ್ಷಾರ್ಥಿಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಅನಧಿಕೃತ ರೀತಿಯಲ್ಲಿ ನೆರವನ್ನು ನೀಡುವುದು.

(2) ಇದರಲ್ಲಿ ಬಳಸಿರುವ ಆದರೆ ಪರಿಭಾಷಿಸದಿರುವ ಪದಗಳು ಮತ್ತು ಪದಾವಳಿಗಳು, ಭಾರತೀಯ ದಂಡ ಸಂಹಿತೆ, 1860 (1860ರ ಕೇಂದ್ರ ಅಧಿನಿಯಮ ಸಂ. 45)ರಲ್ಲಿ ಅವುಗಳಿಗೆ ನೀಡಲಾದ ಅದೇ ಅರ್ಥವನ್ನು ಹೊಂದಿರತಕ್ಕದ್ದು.

**3. ಅನುಚಿತ ವಿಧಾನಗಳ ಬಳಕೆಯ ನಿಷೇಧ.-** ಯಾರೇ ವ್ಯಕ್ತಿಯು ಯಾವುದೇ ಸಾರ್ವಜನಿಕ ಪರೀಕ್ಷೆಯಲ್ಲಿ ಅನುಚಿತ ವಿಧಾನಗಳನ್ನು ಬಳಸತಕ್ಕದ್ದಲ್ಲ.

**4. ಪ್ರಶ್ನೆ ಪತ್ರಿಕೆಯ ಸ್ವಾಧೀನ ಮತ್ತು ಬಹಿರಂಗ ಪಡಿಸುವಿಕೆ.-** ಸಾರ್ವಜನಿಕ ಪರೀಕ್ಷೆಯನ್ನು ನಡೆಸಲು ಆತನ ಕರ್ತವ್ಯಗಳ ಬಲದಿಂದ ಕಾನೂನು ಬದ್ಧವಾಗಿ ಅಧಿಕಾರವನ್ನು ಹೊಂದಿರುವ ಯಾರೇ ವ್ಯಕ್ತಿಯು, ಪ್ರಶ್ನೆ ಪತ್ರಿಕೆಗಳನ್ನು ತೆರೆಯುವುದಕ್ಕಾಗಿ ಮತ್ತು ವಿತರಿಸುವುದಕ್ಕಾಗಿ ನಿಗದಿಪಡಿಸಿದ ಸಮಯಕ್ಕೆ ಮೊದಲು,-

(ಎ) ಅಂಥ ಪ್ರಶ್ನೆ ಪತ್ರಿಕೆಯನ್ನು ಅಥವಾ ಅದರ ಯಾವುದೇ ಭಾಗವನ್ನು ತೆರೆಯತಕ್ಕದ್ದಲ್ಲ, ಅಥವಾ ಸೋರಿಕೆ ಮಾಡತಕ್ಕದ್ದಲ್ಲ ಅಥವಾ ಸಂಗ್ರಹಿಸತಕ್ಕದ್ದಲ್ಲ ಅಥವಾ ಸಂಗ್ರಹಿಸಲು ಪ್ರಯತ್ನಿಸತಕ್ಕದ್ದಲ್ಲ, ಸ್ವಾಧೀನ ಪಡಿಸಿಕೊಳ್ಳತಕ್ಕದ್ದಲ್ಲ ಅಥವಾ ಬಿಡಿಸತಕ್ಕದ್ದಲ್ಲ ಅಥವಾ ಅದರ ನಕಲು ಪ್ರತಿಯನ್ನು ತೆಗೆದು ಸೋರಿಕೆ ಮಾಡತಕ್ಕದ್ದಲ್ಲ;

(ಬಿ) ಅಂಥ ಪ್ರಶ್ನೆ ಪತ್ರಿಕೆಗೆ ಸಂಬಂಧಿಸಿದ ಅಥವಾ ಕುರಿತಾದ ಯಾವುದೇ ಗೌಪ್ಯ ಮಾಹಿತಿಯಿದ್ದಲ್ಲಿ, ಅಂಥ ಗೌಪ್ಯ ಮಾಹಿತಿಯನ್ನು ಯಾರೇ ವ್ಯಕ್ತಿ ಅಥವಾ ಪರೀಕ್ಷಾರ್ಥಿಗೆ ನೀಡತಕ್ಕದ್ದಲ್ಲ ಅಥವಾ ಅಂಥ ಗೌಪ್ಯ ಮಾಹಿತಿಯನ್ನು ನೀಡುವುದಾಗಿ ಭರವಸೆ ನೀಡತಕ್ಕದ್ದಲ್ಲ.

**5. ಪರೀಕ್ಷಾ ಕಾರ್ಯವನ್ನು ವಹಿಸಿರುವ ಅಥವಾ ಅದರಲ್ಲಿ ತೊಡಗಿಸಿರುವ ವ್ಯಕ್ತಿಯಿಂದ ಸೋರಿಕೆಯ ಪ್ರತಿಬಂಧ.-** ಸಾರ್ವಜನಿಕ ಪರೀಕ್ಷೆಗೆ ಸಂಬಂಧಿಸಿದ ಯಾವುದೇ ಕಾರ್ಯವನ್ನು ವಹಿಸಿರುವ ಅಥವಾ ಅದರಲ್ಲಿ ತೊಡಗಿಸಿರುವ ಯಾರೇ ವ್ಯಕ್ತಿಯು, ತನ್ನ ಕರ್ತವ್ಯಗಳ ಬಲದಿಂದ ಹಾಗೆ ಮಾಡುವುದಕ್ಕೆ ಆತನನ್ನು ಅನುಮತಿಸಿದ ಹೊರತು, ತನಗೆ ಒಪ್ಪಿಸಲಾದ ಕಾರ್ಯದ ಕಾರಣದಿಂದ ತನ್ನ ಅರಿವಿಗೆ ಬಂದ ಯಾವುದೇ ಮಾಹಿತಿ ಅಥವಾ ಅದರ ಭಾಗವನ್ನು ಯಾರೇ ಇತರ ವ್ಯಕ್ತಿಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಬಹಿರಂಗಪಡಿಸತಕ್ಕದ್ದಲ್ಲ ಅಥವಾ ಬಹಿರಂಗಪಡಿಸುವಂತೆ ಮಾಡತಕ್ಕದ್ದಲ್ಲ.

**6. ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆ ಅಥವಾ ಓಎಂಆರ್ ಶೀಟ್-ಅನ್ನು ಯಾವುದೇ ರೀತಿಯಲ್ಲಿ ಅನಧಿಕೃತವಾಗಿ ಸ್ವಾಧೀನ ಪಡಿಸಿಕೊಳ್ಳುವಿಕೆ ಅಥವಾ ಬಹಿರಂಗಪಡಿಸುವಿಕೆ.-** ಸಾರ್ವಜನಿಕ ಪರೀಕ್ಷೆಯನ್ನು ನಡೆಸಲು ಆತನ ಕರ್ತವ್ಯಗಳ ಬಲದಿಂದ ಕಾನೂನು ಬದ್ಧವಾಗಿ ಅಧಿಕಾರವನ್ನು ಹೊಂದಿರುವ ಯಾರೇ ವ್ಯಕ್ತಿಯು, ಪ್ರಶ್ನೆ ಪತ್ರಿಕೆಗಳನ್ನು ವಿತರಿಸುವುದಕ್ಕಾಗಿ ನಿಗದಿಪಡಿಸಿದ ಸಮಯಕ್ಕೆ ಮೊದಲು,-

(ಎ) ಅಂಥ ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆ ಅಥವಾ ಓಎಂಆರ್ ಶೀಟ್ ಅಥವಾ ಅದರ ಯಾವುದೇ ಭಾಗ ಅಥವಾ ಅದರ ನಕಲನ್ನು ಯಾವುದೇ ರೀತಿಯಲ್ಲಿ ಸಂಗ್ರಹಿಸತಕ್ಕದ್ದಲ್ಲ ಅಥವಾ ಸಂಗ್ರಹಿಸಲು ಪ್ರಯತ್ನಿಸತಕ್ಕದ್ದಲ್ಲ ಅಥವಾ ಸ್ವಾಧೀನ ಪಡಿಸಿಕೊಳ್ಳತಕ್ಕದ್ದಲ್ಲ; ಅಥವಾ

(ಬಿ) ಅಂಥ ಪ್ರಶ್ನೆಪತ್ರಿಕೆಗೆ ಸಂಬಂಧಿಸಿರುವ ಅಥವಾ ಅದರಿಂದ ಪ್ರಾಪ್ತಿಯಾದ ಅಥವಾ ಅದರ ಕುರಿತಾದ ಅವನಿಗೆ ತಿಳಿದ ಅಥವಾ ಅದರ ಮೇಲೆ ಪ್ರಭಾವ ಬೀರಲು ಕಾರಣವನ್ನು ಹೊಂದಿರುವಂಥ ಮಾಹಿತಿಯನ್ನು ನೀಡತಕ್ಕದ್ದಲ್ಲ ಅಥವಾ ನೀಡಲು ಮುಂದಾಗತಕ್ಕದ್ದಲ್ಲ.

**7. ಪರೀಕ್ಷಾ ಕೇಂದ್ರದೊಳಗೆ ಪ್ರವೇಶಕ್ಕೆ ನಿಷೇಧ.-** ಸಾರ್ವಜನಿಕ ಪರೀಕ್ಷೆಗೆ ಅಥವಾ ಸಾರ್ವಜನಿಕ ಪರೀಕ್ಷೆಯನ್ನು ನಡೆಸುವುದಕ್ಕೆ ಸಂಬಂಧಿಸಿರುವ ಕಾರ್ಯವನ್ನು ವಹಿಸದಿರುವ ಅಥವಾ ಅದರಲ್ಲಿ ತೊಡಗಿಸದಿರುವ ಅಥವಾ ಪರೀಕ್ಷಾರ್ಥಿಯಲ್ಲದ ಯಾರೇ ವ್ಯಕ್ತಿಯು ಪರೀಕ್ಷಾ ಕೇಂದ್ರದ ಆವರಣವನ್ನು ಪ್ರವೇಶಿಸತಕ್ಕದ್ದಲ್ಲ.

**8. ಸಾರ್ವಜನಿಕ ಪರೀಕ್ಷೆಗಾಗಿ ಪರೀಕ್ಷಾ ಕೇಂದ್ರವನ್ನು ಹೊರತುಪಡಿಸಿ ಬೇರೆ ಯಾವುದೇ ಇತರ ಸ್ಥಳವನ್ನು ಬಳಸತಕ್ಕದ್ದಲ್ಲ.-** ಸಾರ್ವಜನಿಕ ಪರೀಕ್ಷೆಗೆ ಸಂಬಂಧಿಸಿದ ಕಾರ್ಯವನ್ನು ವಹಿಸಿರುವ ಅಥವಾ ಅದರಲ್ಲಿ ತೊಡಗಿಸಿರುವ ಯಾರೇ ವ್ಯಕ್ತಿಯು, ಸಾರ್ವಜನಿಕ ಪರೀಕ್ಷೆಯನ್ನು ನಡೆಸುವ ಉದ್ದೇಶಕ್ಕಾಗಿ ಗೊತ್ತುಪಡಿಸಲಾದ ಪರೀಕ್ಷಾ ಕೇಂದ್ರವನ್ನು ಹೊರತುಪಡಿಸಿ ಇತರ ಯಾವುದೇ ಸ್ಥಳವನ್ನು ಬಳಸತಕ್ಕದ್ದಲ್ಲ ಅಥವಾ ಬಳಸುವಂತೆ ಮಾಡತಕ್ಕದ್ದಲ್ಲ.

**9. ಆಡಳಿತ ಮಂಡಳಿ, ಸಂಸ್ಥೆ ಅಥವಾ ಇತರರಿಂದ ಅಪರಾಧಗಳು.-** (1) ಆಡಳಿತ ಮಂಡಳಿ ಅಥವಾ ಸಂಸ್ಥೆ ಅಥವಾ ಸೀಮಿತ ಹೊಣೆಗಾರಿಕೆ ಸಹಭಾಗಿತ್ವ ಅಥವಾ ಇತರರು ಈ ಅಧಿನಿಯಮದಡಿಯಲ್ಲಿನ ಒಂದು ಅಪರಾಧವನ್ನು ಎಸಗಿದಲ್ಲಿ, ಅಪರಾಧ ಎಸಗಿದ ಸಮಯದಲ್ಲಿ ಆಡಳಿತ ಮಂಡಳಿ ಅಥವಾ ಸಂಸ್ಥೆ ಅಥವಾ ಸೀಮಿತ ಹೊಣೆಗಾರಿಕೆ ಸಹಭಾಗಿತ್ವ ಅಥವಾ ಇತರರು ವ್ಯವಹಾರ ನಡೆಸುವುದಕ್ಕಾಗಿ ಆಡಳಿತ ಮಂಡಳಿ ಅಥವಾ ಸಂಸ್ಥೆ ಅಥವಾ ಸೀಮಿತ ಹೊಣೆಗಾರಿಕೆ ಸಹಭಾಗಿತ್ವ ಅಥವಾ ಇತರರ ಪ್ರಭಾರೆಯಲ್ಲಿರುವ ಅಥವಾ ಅದಕ್ಕೆ ಜವಾಬ್ದಾರನಾಗಿರುವ ಪ್ರತಿಯೊಬ್ಬ ವ್ಯಕ್ತಿಯು ಹಾಗೂ ಆಡಳಿತ ಮಂಡಳಿ ಅಥವಾ ಸಂಸ್ಥೆ ಅಥವಾ ಸೀಮಿತ ಹೊಣೆಗಾರಿಕೆ ಸಹಭಾಗಿತ್ವ ಅಥವಾ ಇತರರನ್ನು ಅಪರಾಧದ ತಪ್ಪಿತಸ್ಥರೆಂದು ಭಾವಿಸತಕ್ಕದ್ದು ಮತ್ತು ಅವರು ತಮ್ಮ ವಿರುದ್ಧ ಕ್ರಮ ಜರುಗಿಸಲು ಹೊಣೆಯಾಗತಕ್ಕದ್ದು ಮತ್ತು ತದನುಸಾರ ಶಿಕ್ಷೆಗೆ ಗುರಿಯಾಗತಕ್ಕದ್ದು:

ಪರಂತು, ಈ ಉಪ-ಪ್ರಕರಣದಲ್ಲಿ ಒಳಗೊಂಡಿರುವುದಾವುದೂ, ಯಾರೇ ಅಂಥ ವ್ಯಕ್ತಿಯು, ಅಪರಾಧವು ತನ್ನ ಗಮನಕ್ಕೆ ಬಾರದೆ ನಡೆಯಿತೆಂದು ಮತ್ತು ಅಂಥ ಅಪರಾಧ ನಡೆಯುವುದನ್ನು ತಡೆಗಟ್ಟಲು ತಾನು ಎಲ್ಲಾ ಯುಕ್ತ ಜಾಗರೂಕತೆಯನ್ನು ವಹಿಸಿದ್ದೇನೆಂದು ರುಜುವಾತು ಪಡಿಸಿದಲ್ಲಿ, ಆತನನ್ನು ಈ ಅಧಿನಿಯಮದಡಿಯಲ್ಲಿನ ಯಾವುದೇ ದಂಡನೆಗೆ ಹೊಣೆಗಾರನಾಗಿಸತಕ್ಕದ್ದಲ್ಲ.

(2) ಉಪ-ಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದಡಿಯಲ್ಲಿನ ಒಂದು ಅಪರಾಧವು, ಆಡಳಿತ ಮಂಡಳಿ ಅಥವಾ ಸಂಸ್ಥೆ ಅಥವಾ ಸೀಮಿತ ಹೊಣೆಗಾರಿಕೆ ಸಹಭಾಗಿತ್ವ ಅಥವಾ ಇತರರು ಎಸಗಿದ್ದಲ್ಲಿ ಮತ್ತು ಆಡಳಿತ ಮಂಡಳಿ ಅಥವಾ ಸಂಸ್ಥೆ ಅಥವಾ ಸೀಮಿತ ಹೊಣೆಗಾರಿಕೆ ಸಹಭಾಗಿತ್ವ ಅಥವಾ ಇತರರ ಯಾರೇ ನಿರ್ದೇಶಕ, ಪಾಲುದಾರ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಒಪ್ಪಿಗೆ ಅಥವಾ ಪರೋಕ್ಷ ಸಮ್ಮತಿಯಿಂದ ಅಥವಾ ಯಾವುದೇ ನಿರ್ಲಕ್ಷ್ಯದಿಂದ ನಡೆಯಿತೆಂಬ ಆರೋಪವು ರುಜುವಾತಾದರೆ, ಅಂಥ ನಿರ್ದೇಶಕ, ಪಾಲುದಾರ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ ಅಪರಾಧದ ತಪ್ಪಿತಸ್ಥರೆಂದು ಭಾವಿಸತಕ್ಕದ್ದು ಹಾಗೂ ತಮ್ಮ ವಿರುದ್ಧ ಕ್ರಮ ಜರುಗಿಸಲು ಹೊಣೆಯಾಗತಕ್ಕದ್ದು ಮತ್ತು ತದನುಸಾರ ಶಿಕ್ಷೆಗೆ ಗುರಿಯಾಗತಕ್ಕದ್ದು.

**10. ದಂಡನೆಗಳು.-** (1) ಯಾರೇ ಪರೀಕ್ಷಾರ್ಥಿಯು, ಪ್ರಕರಣ 2ರ ಖಂಡ (ಎಫ್) ರಲ್ಲಿ ಪರಿಭಾಷಿಸಲಾದಂಥ ಅನುಚಿತ ವಿಧಾನಗಳಲ್ಲಿ ತೊಡಗಿದರೆ, ಆತನು ಐದು ವರ್ಷಗಳ ವರೆಗೆ

ವಿಸ್ತರಿಸಬಹುದಾದ ಅವಧಿಯ ಕಾರಾವಾಸದ ದಂಡನೆಗೆ ಗುರಿಯಾಗತಕ್ಕದ್ದು ಮತ್ತು ಹತ್ತು ಲಕ್ಷ ರೂಪಾಯಿಗಳಿಗಿಂತ ಕಡಿಮೆಯಿರದ ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು ಮತ್ತು ಅಂಥ ಪರೀಕ್ಷಾರ್ಥಿಯು ಅಂಥ ಜುಲ್ಮಾನೆಯನ್ನು ಸಂದಾಯ ಮಾಡಲು ತಪ್ಪಿದ ಸಂದರ್ಭದಲ್ಲಿ ಆತನು ಹದಿನೈದು ತಿಂಗಳುಗಳ ಅವಧಿಯ ಕಾರಾವಾಸದ ದಂಡನೆಗೆ ಗುರಿಯಾಗತಕ್ಕದ್ದು.

(2) ಪರೀಕ್ಷಾರ್ಥಿಯು ಸೇರಿದಂತೆ, ಸಾರ್ವಜನಿಕ ಪರೀಕ್ಷೆ ನಡೆಸುವ ಕಾರ್ಯವನ್ನು ವಹಿಸಿರುವ ಅಥವಾ ವಹಿಸದಿರುವ ಅಥವಾ ಅಧಿಕೃತಗೊಳಿಸಿರುವ ಅಥವಾ ಗೊಳಿಸದಿರುವ ಯಾರೇ ವ್ಯಕ್ತಿಯು ಪ್ರಕರಣ 2ರ ಖಂಡ (ಎಫ್) ರಲ್ಲಿ ಪರಿಭಾಷಿಸಲಾದಂತೆ ಅನುಚಿತ ವಿಧಾನಗಳಲ್ಲಿ ಒಳಸಂಚು ನಡೆಸಿದರೆ ಅಥವಾ ಅನ್ಯಥಾ ತೊಡಗಿದರೆ ಅಥವಾ ತೊಡಗಲು ಪ್ರಯತ್ನಿಸಿದರೆ ಅಥವಾ ಈ ಅಧಿನಿಯಮದ ಯಾವುದೇ ಉಪಬಂಧಗಳನ್ನು ಉಲ್ಲಂಘಿಸಿದರೆ ಅಥವಾ ಉಲ್ಲಂಘಿಸಲು ಪ್ರಯತ್ನಿಸಿದರೆ, ಆತನು ಎಂಟು ವರ್ಷಗಳಿಗಿಂತ ಕಡಿಮೆಯಿರದ ಆದರೆ ಹನ್ನೆರಡು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಹದಿನೈದು ಲಕ್ಷ ರೂಪಾಯಿಗಳಿಗಿಂತ ಕಡಿಮೆಯಿರದ ಆದರೆ ಹತ್ತು ಕೋಟಿ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು ಮತ್ತು ಅಂಥ ವ್ಯಕ್ತಿಯು ಜುಲ್ಮಾನೆಯನ್ನು ಸಂದಾಯ ಮಾಡಲು ತಪ್ಪಿದ ಸಂದರ್ಭದಲ್ಲಿ, ಎರಡು ವರ್ಷಗಳ ಅವಧಿಯ ಕಾರಾವಾಸದ ದಂಡನೆಗೂ ಸಹ ಗುರಿಯಾಗತಕ್ಕದ್ದು:

ಪರಂತು, ನ್ಯಾಯಾಲಯವು ತನ್ನ ತೀರ್ಪಿನಲ್ಲಿ ದಾಖಲಿಸುವ ಯಾವುದೇ ಪರ್ಯಾಪ್ತ ಮತ್ತು ವಿಶೇಷ ಕಾರಣಗಳಿಗಾಗಿ ಐದು ವರ್ಷಗಳಿಗಿಂತ ಕಡಿಮೆ ಅವಧಿಯ ಕಾರಾವಾಸದ ಶಿಕ್ಷೆಯನ್ನು ವಿಧಿಸಬಹುದು.

**11. ಅಪರಾಧ ನಿರ್ಣಯದ ಮೇಲೆ ಅನರ್ಹಗೊಳಿಸುವಿಕೆ.-** (1) ಇನ್ನೊಬ್ಬನಂತೆ ನಟಿಸುತ್ತಿರುವ ಅಥವಾ ನಕಲಿ ದಸ್ತಾವೇಜು ಅಥವಾ ಅಕ್ರಮವಾಗಿ ತಿದ್ದಿದ ದಸ್ತಾವೇಜನ್ನು ಸಲ್ಲಿಸುವ ಅಥವಾ ತಪ್ಪಾದ ಅಥವಾ ಸುಳ್ಳು ಹೇಳಿಕೆಗಳನ್ನು ನೀಡುವ ಅಥವಾ ಮಹತ್ವದ ಮಾಹಿತಿಯನ್ನು ಮುಚ್ಚಿಡುವ ಅಥವಾ ಪರೀಕ್ಷಾ ಕೊಠಡಿಯಲ್ಲಿ ಅನುಚಿತ ವಿಧಾನಗಳನ್ನು ಬಳಸುತ್ತಿರುವ ಅಥವಾ ಬಳಸಲು ಪ್ರಯತ್ನಿಸುತ್ತಿರುವ ಅಥವಾ ಯಾವುದೇ ಪರೀಕ್ಷೆಯ ಸಂಬಂಧದಲ್ಲಿ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ವಿಧಾನಗಳನ್ನು ಅನ್ಯಥಾ ಅವಲಂಬಿಸಿರುವ ಪರೀಕ್ಷಾರ್ಥಿಯು ಪರೀಕ್ಷಾ ಪ್ರಾಧಿಕಾರದ ಮೂಲಕ ಮೇಲ್ನೋಟಕ್ಕೆ ದೋಷಿಯೆಂದು ಕಂಡು ಬಂದರೆ, ಅಂಥ ಪರೀಕ್ಷಾರ್ಥಿಯನ್ನು ಪರೀಕ್ಷಾ ಪ್ರಾಧಿಕಾರವು ಅಪರಾಧಿಕ ಪ್ರಾಸಿಕ್ಯೂಶನ್ನಿಗೆ ಗುರಿಪಡಿಸುವುದರ ಜೊತೆಗೆ ಶಾಶ್ವತವಾಗಿ ಅಥವಾ ನಿರ್ದಿಷ್ಟ ಅವಧಿಗಾಗಿ ಪರೀಕ್ಷಾ ಪ್ರಾಧಿಕಾರವು ನಡೆಸುವ ಯಾವುದೇ ಪರೀಕ್ಷೆಯನ್ನು ತೆಗೆದುಕೊಳ್ಳುವುದಕ್ಕೆ ಅಥವಾ ಯಾವುದೇ ಪರೀಕ್ಷೆ ಅಥವಾ ಸಂದರ್ಶನಕ್ಕೆ ಹಾಜರಾಗುವುದರಿಂದ ಅನರ್ಹಗೊಳಿಸತಕ್ಕದ್ದು.

(2) ಈ ಅಧಿನಿಯಮದ ಉಪಬಂಧಗಳಡಿ ಅಪರಾಧ ನಿರ್ಣಯವಾದ ಪರಿಕ್ಷಾರ್ಥಿಯನ್ನು ಎರಡು ವರ್ಷಗಳ ಅವಧಿಗಾಗಿ ಯಾವುದೇ ಸಾರ್ವಜನಿಕ ಪರೀಕ್ಷೆಯನ್ನು ತೆಗೆದುಕೊಳ್ಳುವುದರಿಂದ ಅನರ್ಹಗೊಳಿಸತಕ್ಕದ್ದು.

**12. ಸ್ವತ್ತಿನ ಮುಟ್ಟುಗೋಲು ಮತ್ತು ಜಪ್ತಿ.-** (1) ಯಾರೇ ವ್ಯಕ್ತಿಯು ಈ ಅಧಿನಿಯಮದಡಿಯಲ್ಲಿನ ಯಾವುದೇ ಅಪರಾಧದಿಂದ ಪ್ರಾಪ್ತವಾದ ಯಾವುದೇ ಉತ್ಪತ್ತಿಯನ್ನು ಸ್ವಾಧೀನದಲ್ಲಿರಿಸಿಕೊಳ್ಳತಕ್ಕದ್ದಲ್ಲ ಅಥವಾ ಹೊಂದತಕ್ಕದ್ದಲ್ಲ.

(2) ಈ ಅಧಿನಿಯಮದಡಿಯಲ್ಲಿ ಮಾಡಲಾದ ಅಪರಾಧದ ತನಿಖೆ ಮಾಡುತ್ತಿರುವ ಅಧಿಕಾರಿಯು ಈ ಅಧಿನಿಯಮದಡಿಯಲ್ಲಿನ ಯಾವುದೇ ಅಪರಾಧದಿಂದ ಯಾವುದೇ ಸ್ವತ್ತು ಪ್ರಾಪ್ತವಾಗಿದೆಯೆಂದು ನಂಬಲು ಕಾರಣಗಳನ್ನು ಹೊಂದಿದ್ದರೆ, ಆತನು ರಾಜ್ಯ ಸರ್ಕಾರದ ಲಿಖಿತ ಪೂರ್ವಾನುಮೋದನೆ ಪಡೆದು ಅಂಥ ಚರ ಅಥವಾ ಸ್ಥಿರ ಅಥವಾ ಎರಡೂ ಸ್ವತ್ತನ್ನು ವಶಪಡಿಸಿಕೊಳ್ಳುವ ಆದೇಶವನ್ನು ಮಾಡತಕ್ಕದ್ದು ಮತ್ತು ಅಂಥ ಸ್ವತ್ತನ್ನು ವಶಪಡಿಸಿಕೊಳ್ಳಲು ಕಾರ್ಯಸಾಧ್ಯವಾಗದೇ ಇದ್ದಲ್ಲಿ, ಅಂಥ ಆದೇಶವನ್ನು ಮಾಡುವ ಅಥವಾ ಸಂದರ್ಭಾನುಸಾರ, ಗೊತ್ತುಪಡಿಸಿದ ನ್ಯಾಯಾಲಯದ ಪೂರ್ವ ಅನುಮತಿ ಪಡೆದ ಹೊರತು ಅಂಥ ಸ್ವತ್ತಿನ ವರ್ಗಾವಣೆ ಮಾಡತಕ್ಕದ್ದಲ್ಲವೆಂದು ಅಥವಾ ಅನ್ಯಥಾ ವ್ಯವಹರಿಸತಕ್ಕದ್ದಲ್ಲವೆಂದು ನಿರ್ದೇಶಸುವ ಜಪ್ತಿ ಆದೇಶವನ್ನು ಮಾಡತಕ್ಕದ್ದು ಮತ್ತು ಅಂಥ ಆದೇಶದ ಪ್ರತಿಯನ್ನು ಸಂಬಂಧಪಟ್ಟ ವ್ಯಕ್ತಿಗೆ ಜಾರಿ ಮಾಡತಕ್ಕದ್ದು.

(3) ತನಿಖಾಧಿಕಾರಿಯು ಅಂಥ ಸ್ವತ್ತನ್ನು ವಶಪಡಿಸಿಕೊಂಡ ಅಥವಾ ಜಪ್ತಿ ಮಾಡಿದ ನಲವತ್ತೆಂಟು ಗಂಟೆಯೊಳಗೆ ಗೊತ್ತುಪಡಿಸಲಾದ ನ್ಯಾಯಾಲಯಕ್ಕೆ ಯುಕ್ತ ಮಾಹಿತಿ ನೀಡತಕ್ಕದ್ದು.

(4) ಉಪಪ್ರಕರಣ (2)ರಡಿಯಲ್ಲಿ ಮಾಡಿದ ವಶಪಡಿಸಿಕೊಳ್ಳುವಿಕೆ ಅಥವಾ ಜಪ್ತಿ ಆದೇಶವನ್ನು ಸ್ಥಿರೀಕರಿಸಲು ಅಥವಾ ರದ್ದುಗೊಳಿಸಲು ಗೊತ್ತುಪಡಿಸಿದ ನ್ಯಾಯಾಲಯವು ಮುಕ್ತವಾಗಿರತಕ್ಕದ್ದು:

ಪರಂತು, ಗೊತ್ತುಪಡಿಸಿದ ನ್ಯಾಯಾಲಯವು ಯಾರ ಸ್ವತ್ತನ್ನು ಜಪ್ತಿ ಮಾಡಲಾಗುತ್ತಿದೆಯೋ ಆ ವ್ಯಕ್ತಿಗೆ ಮನವಿಯನ್ನು ಸಲ್ಲಿಸಲು ಯುಕ್ತ ಅವಕಾಶ ನೀಡಿದ ಹೊರತು ಆದೇಶವನ್ನು ಮಾಡತಕ್ಕದ್ದಲ್ಲ.

(5) ಆಪಾದಿತನು ಈ ಅಧಿನಿಯಮದಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧದ ಅಪರಾಧಿಯೆಂದು ನ್ಯಾಯ ನಿರ್ಣಿತನಾಗಿದ್ದಲ್ಲಿ, ಗೊತ್ತುಪಡಿಸಲಾದ ನ್ಯಾಯಾಲಯವು ಲಿಖಿತ ಆದೇಶದ ಮೂಲಕ ಯಾವುದೇ ದಂಡನೆಯನ್ನು ವಿಧಿಸುವುದರ ಜೊತೆಗೆ, ಆಪಾದಿತನಿಗೆ ಸೇರಿದ ಮತ್ತು ಆದೇಶದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಚರ ಅಥವಾ ಸ್ಥಿರ ಅಥವಾ ಎರಡೂ ಆಸ್ತಿಯನ್ನು ಎಲ್ಲಾ ಋಣಭಾರಗಳಿಂದ ಮುಕ್ತವಾಗಿ ಕೂಡಲೇ ರಾಜ್ಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳತಕ್ಕದೆಂದು ಘೋಷಿಸಬಹುದು.

**ವಿವರಣೆ.-** ಈ ಪ್ರಕರಣದ ಉದ್ದೇಶಕ್ಕಾಗಿ "ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ಅಪರಾಧದ ಉತ್ಪತ್ತಿಗಳು" ಎಂದರೆ, ಈ ಅಧಿನಿಯಮದಡಿಯಲ್ಲಿನ ಯಾವುದೇ ಅಪರಾಧ ಮಾಡುವುದರಿಂದ ಪ್ರಾಪ್ತಿಯಾಗಿರುವ ಅಥವಾ ಪಡೆಯಲಾಗಿ ವ ಅಥವಾ ಈ ಅಧಿನಿಯಮದಡಿಯಲ್ಲಿನ ಯಾವುದೇ ಅಪರಾಧಕ್ಕೆ ಕಾರಣವೆಂದು ಹೇಳಬಹುದಾದ ನಿಧಿಗಳ ಮುಖಾಂತರ ಆರ್ಜಿಸಲಾಗಿರುವ ಎಲ್ಲಾ ವಿಧದ ಸ್ವತ್ತುಗಳು.

**13. ಎಲ್ಲಾ ಖರ್ಚು ಅಥವಾ ವೆಚ್ಚವನ್ನು ಪಾವತಿಸಲು ಆಡಳಿತ ಮಂಡಳಿ, ಮುಂತಾದವುಗಳ ಹೊಣೆಗಾರಿಕೆ.-** ಆಡಳಿತ ಮಂಡಳಿ ಅಥವಾ ಸಂಸ್ಥೆ ಅಥವಾ ಸೀಮಿತ ಹೊಣೆಗಾರಿಕೆ ಸಹಭಾಗಿತ್ವದ ವ್ಯಕ್ತಿ ಅಥವಾ ಇತರರು ಈ ಅಧಿನಿಯಮದ 10ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿನ ಅಪರಾಧದ ದೋಷಿಯೆಂದು ಕಂಡು ಬಂದರೆ, ಆಡಳಿತ ಮಂಡಳಿ ಅಥವಾ ಸಂಸ್ಥೆ ಅಥವಾ ಸೀಮಿತ ಹೊಣೆಗಾರಿಕೆ ಸಹಭಾಗಿತ್ವದ ಅಥವಾ ಇತರರು, ಗೊತು ಪಡಿಸಿದ ನ್ಯಾಯಾಲಯವು ನಿರ್ಧರಿಸಿದಂತೆ ಪರೀಕ್ಷೆಗೆ ಸಂಬಂಧಪಟ್ಟ ಎಲ್ಲಾ ಖರ್ಚು ಮತ್ತು ವೆಚ್ಚವನ್ನು ಪಾವತಿಸಲು ಹೊಣೆಗಾರರಾಗಿರತಕ್ಕದ್ದು ಮತ್ತು ಶಾಶ್ವತವಾಗಿ ಪ್ರತಿಶೇಧಿಸತಕ್ಕದ್ದು.

**14. ಸಂಜ್ಞೇಯವಾದ, ಜಾಮೀನು ರಹಿತವಾದ ಮತ್ತು ರಾಜಿ ಸಂಧಾನ ಮಾಡಿಕೊಳ್ಳದ ಅಪರಾಧಗಳು.-** ಈ ಅಧಿನಿಯಮದಡಿ ನಿರ್ದಿಷ್ಟಪಡಿಸಲಾದ ಎಲ್ಲಾ ಅಪರಾಧಗಳು, ಸಂಜ್ಞೇಯ, ಜಾಮೀನು ರಹಿತ ಮತ್ತು ರಾಜೀ ಸಂಧಾನಮಾಡಿಕೊಳ್ಳಲಿಕ್ಕಾಗದ ಅಪರಾಧಗಳಾಗಿರತಕ್ಕದ್ದು.

**15. ಅಪರಾಧಗಳ ತನಿಖೆ.-** ಅಪರ ಪೊಲೀಸ್ ಅಧೀಕ್ಷಕರ ದರ್ಜೆಗಿಂತ ಕಡಿಮೆಯಿರುವ ಯಾರೇ ಪೊಲೀಸ್ ಅಧಿಕಾರಿಯು ಈ ಅಧಿನಿಯಮದಡಿಯಲ್ಲಿ ಮಾಡಲಾದ ಯಾವುದೇ ಅಪರಾಧದ ತನಿಖೆಯನ್ನು ನಡೆಸತಕ್ಕದ್ದಲ್ಲ.

**16. ಗೊತ್ತುಪಡಿಸಿದ ನ್ಯಾಯಾಲಯಗಳು ಅಧಿವಿಚಾರಣೆ ಮಾಡಬಹುದಾದ ಪ್ರಕರಣಗಳು.-** ದಂಡ ಪ್ರಕ್ರಿಯಾ ಸಂಹಿತೆ 1973 (1974ರ ಕೇಂದ್ರ ಅಧಿನಿಯಮ ಸಂ.2) ರ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳಿಗೆ ಬಾಧಕವಾಗದಂತೆ, ಈ ಅಧಿನಿಯಮದಡಿ ನಿರ್ದಿಷ್ಟಪಡಿಸಲಾದ ಅಪರಾಧಗಳನ್ನು ಈ ಅಧಿನಿಯಮದಡಿ ಗೊತ್ತುಪಡಿಸಲಾದ ನ್ಯಾಯಾಲಯಗಳ ಮೂಲಕ ಅಧಿವಿಚಾರಣೆ ನಡೆಸತಕ್ಕದ್ದು.

**17. ಗೊತ್ತುಪಡಿಸಿದ ನ್ಯಾಯಾಲಯಗಳನ್ನು ನೇಮಕ ಮಾಡುವ ಅಧಿಕಾರ.-** ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯ ಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದಡಿ ದಂಡನೀಯವಾದ ಅಪರಾಧಗಳ ಅಧಿವಿಚಾರಣೆ ಮಾಡಲು ಅವಶ್ಯಕವಾಗಬಹುದಂತೆ ಕರ್ನಾಟಕದ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರೊಂದಿಗೆ ಸಮಾಲೋಚಿಸಿ ಅಂಥ ಸೆಷನ್ಸ್ ನ್ಯಾಯಾಲಯಗಳನ್ನು ಗೊತ್ತುಪಡಿಸಬಹುದು.

**18. ನಿರ್ದೇಶನಗಳನ್ನು ನೀಡುವ ಅಧಿಕಾರ.-** ರಾಜ್ಯ ಸರ್ಕಾರ ಅಥವಾ ಈ ಬಗ್ಗೆ ಆದೇಶದ ಮೂಲಕ ಸರ್ಕಾರವು ವಿಶೇಷವಾಗಿ ಅಧಿಕಾರ ನೀಡಿದ ಯಾರೇ ಅಧಿಕಾರಿ ಅಥವಾ ಪ್ರಾಧಿಕಾರವು ಯಾವುದೇ ಶೈಕ್ಷಣಿಕ ಸಂಸ್ಥೆ ಅಥವಾ ಟ್ಯೂಟೋರಿಯಲ್ ಸಂಸ್ಥೆ ಅಥವಾ ಯಾವುದೇ ಅಧಿಕಾರಿಗೆ ಅಥವಾ ಇತರ ವ್ಯಕ್ತಿಗೆ ಈ ಅಧಿನಿಯಮದ ಅಥವಾ ಅದರಡಿಯಲ್ಲಿ ಮಾಡಲಾದ ಯಾವುದೇ ನಿಯಮ ಅಥವಾ ಯಾವುದೇ ಆದೇಶದ ಯಾವುದೇ ಉಪಬಂಧವನ್ನು ಜಾರಿಗೆ ತರುವಂತೆ ನಿರ್ದೇಶನಗಳನ್ನು ನೀಡಬಹುದು ಮತ್ತು ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

**19. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.-** ಈ ಅಧಿನಿಯಮದಡಿ ಅಥವಾ ಅದರಡಿ ಮಾಡಲಾದ ನಿಯಮಗಳು ಅಥವಾ ಆದೇಶಗಳಡಿಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಬೇಕೆಂದು ಉದ್ದೇಶಿಸಲಾದ ಯಾವುದೇ ಕಾರ್ಯಕ್ಕಾಗಿ, ಸರ್ಕಾರ ಅಥವಾ ಸರ್ಕಾರದ ಯಾರೇ ಅಧಿಕಾರಿ ಅಥವಾ ಪ್ರಾಧಿಕಾರ ಅಥವಾ ಯಾರೇ ಇತರ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

**20. ಈ ಅಧಿನಿಯಮವು ಯಾವುದೇ ಇತರೆ ಕಾನೂನನ್ನು ದುರ್ಬಲಗೊಳಿಸುವುದಿಲ್ಲ.-** ಈ ಅಧಿನಿಯಮದ ಉಪಬಂಧಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳಿಗೆ ಹೆಚ್ಚುವರಿಯಾಗಿರತಕ್ಕದ್ದು ಮತ್ತು ಅವುಗಳನ್ನು ದುರ್ಬಲಗೊಳಿಸತಕ್ಕದ್ದಲ್ಲ.

**21. ಅನುಸೂಚಿ ತಿದ್ದುಪಡಿ ಮಾಡುವ ಅಧಿಕಾರ.-** ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯನ್ನು ಪ್ರಕಟಿಸುವುದರ ಮೂಲಕ ಅಧಿನಿಯಮದ ಅನುಸೂಚಿಗಳಿಗೆ ಹೊಸ ಪರೀಕ್ಷಾ ಪ್ರಾಧಿಕಾರವನ್ನು ಅಥವಾ ಸಾರ್ವಜನಿಕ ಪರೀಕ್ಷೆಯನ್ನು ಸೇರಿಸಲು ತಿದ್ದುಪಡಿ ಮಾಡಬಹುದು ಮತ್ತು

ಅಂಥದೇ ಅಧಿಸೂಚನೆಯ ಮೂಲಕ ಅನುಸೂಚಿಯ ನಮೂದುಗಳನ್ನು ತಿದ್ದುಪಡಿ ಮಾಡಬಹುದು ಅಥವಾ ಬದಲಾಯಿಸಬಹುದು.

**22. ತೊಂದರೆಗಳ ನಿವಾರಣಾ ಅಧಿಕಾರ.-** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಸರ್ಕಾರವು ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ತೊಂದರೆಗಳನ್ನು ನಿವಾರಿಸಲು ತನಗೆ ಅವಶ್ಯಕವೆಂದು ಕಂಡುಬರುವ ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಎರಡು ವರ್ಷಗಳ ಅವಧಿಯು ಪೂರ್ಣಗೊಂಡ ತರುವಾಯ ಈ ಪ್ರಕರಣದ ಅಡಿಯಲ್ಲಿ ಅಂಥ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದಡಿ ಮಾಡಲಾದ ಪ್ರತಿಯೊಂದು ಆದೇಶವನ್ನು, ಇದನ್ನು ಮಾಡಿದ ತರುವಾಯ ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.

**23. ನಿಯಮಗಳ ರಚನಾಧಿಕಾರ.-** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಒಂದು ಅಧಿವೇಶನ ಅಥವಾ ಎರಡು ಅಥವಾ ಹೆಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಅದು ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನ ಅಥವಾ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮೊದಲು ಉಭಯ ಸದನಗಳು ಆ ನಿಯಮದಲ್ಲಿ ಯಾವುದೇ ಮಾರ್ಪಾಡು ಮಾಡಲು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸತಕ್ಕದ್ದಲ್ಲವೆಂದು ಉಭಯ ಸದನಗಳು ಒಪ್ಪಿದರೆ ತದನಂತರ ಅಂಥ ನಿಯಮವು ಹಾಗೆ ಮಾರ್ಪಾಟಾದ ರೀತಿಯಲ್ಲಿ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರವಾಗಿ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಯಾವುದೇ ಅಂಥ ಮಾರ್ಪಾಡು ಅಥವಾ ರದ್ದತಿಯು ಆ ನಿಯಮದ ಅಡಿಯಲ್ಲಿ ಈ ಮೊದಲು ಮಾಡಲಾದ ಯಾವುದೇ ಕಾರ್ಯದ ಮಾನ್ಯತೆಗೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**ಅನುಸೂಚಿ-I**

**(ಪ್ರಕರಣ 2 [ಬಿ])**

(1) ಕರ್ನಾಟಕ ಲೋಕ ಸೇವಾ ಆಯೋಗ

(2) ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ)

(3) ರಾಜ್ಯ ಸರ್ಕಾರದ ಮೂಲಕ ರಚಿಸಲಾದ ಅಥವಾ ನಿರತವಾದ ಎಲ್ಲಾ ಇತರ ಪ್ರಾಧಿಕಾರ ಅಥವಾ ಏಜೆನ್ಸಿ ಅಥವಾ ನೇಮಕಾತಿ ಸಮಿತಿ

(4) ರಾಜ್ಯ ಧನಸಹಾಯ ನೀಡಿದ ವಿಶ್ವವಿದ್ಯಾಲಯಗಳು

(5) ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ

(6) ಕರ್ನಾಟಕ ಪೊಲೀಸು ನೇಮಕಾತಿ ಮತ್ತು ಮುಂಬಡ್ತಿ ಮಂಡಳಿ

(7) ರಾಜ್ಯ ಸರ್ಕಾರದ ಒಡೆತನದ ಸಾರ್ವಜನಿಕ ವಲಯದ ಉದ್ಯಮ

(8) ಯಾವುದೇ ಸೊಸೈಟಿಗಳು, ನಿಗಮಗಳು, ಸ್ಥಳೀಯ ಸಂಸ್ಥೆಗಳು ಮತ್ತು ರಾಜ್ಯ ಸರ್ಕಾರದ ಪ್ರಮುಖ ಅಥವಾ ಭಾಗಶ: ಒಡೆತನದ ಸಾರ್ವಜನಿಕ ವಲಯದ ಉದ್ಯಮಗಳು

(9) ರಾಜ್ಯ ಸರ್ಕಾರವು ಅಧಿಸೂಚಿಸಿದ ಯಾವುದೇ ಇತರ ಪ್ರಾಧಿಕಾರ.

## ಅನುಸೂಚಿ -II

**(ಪ್ರಕರಣ 2 [ಇ])**

(1) ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ ನಡೆಸುವ ಯಾವುದೇ ಪರೀಕ್ಷೆ.

(2) ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಮೂಲಕ ನಡೆಸುವ ಯಾವುದೇ ಪರೀಕ್ಷೆ.

(3) ರಾಜ್ಯ ಸರ್ಕಾರದ ಮೂಲಕ ರಚಿಸಲಾದ ಅಥವಾ ನಿರತವಾದ ಯಾವುದೇ ಇತರ ಪ್ರಾಧಿಕಾರ ಅಥವಾ ಏಜೆನ್ಸಿ ಅಥವಾ ನೇಮಕಾತಿ ಸಮಿತಿಯ ಮೂಲಕ ನಡೆಸುವ ಯಾವುದೇ ಪರೀಕ್ಷೆ.

(4) ರಾಜ್ಯ ಸರ್ಕಾರದ ಧನ ಸಹಾಯ ಪಡೆದ ವಿಶ್ವವಿದ್ಯಾಲಯವು ನಡೆಸುವ ಯಾವುದೇ ನೇಮಕಾತಿ ಪರೀಕ್ಷೆ.

(5) ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿಯ ಮೂಲಕ ನಡೆಸುವ ಯಾವುದೇ ನೇಮಕಾತಿ ಪರೀಕ್ಷೆ.

(6) ಕರ್ನಾಟಕ ಪೊಲೀಸು ನೇಮಕಾತಿ ಮತ್ತು ಮುಂಬಡ್ತಿ ಮಂಡಳಿ ಮೂಲಕ ನಡೆಸುವ ಯಾವುದೇ ಪರೀಕ್ಷೆ.

(7) ರಾಜ್ಯ ಸರ್ಕಾರ ಒಡೆತನದ ಸಾರ್ವಜನಿಕ ಉದ್ದಿಮೆಗಳ ಮೂಲಕ ನಡೆಸುವ ಯಾವುದೇ ಪರೀಕ್ಷೆ.

(8) ಯಾವುದೇ ಸೊಸೈಟಿಗಳು, ನಿಗಮಗಳು, ಸ್ಥಳೀಯ ಸಂಸ್ಥೆಗಳ ಮೂಲಕ ಮತ್ತು ರಾಜ್ಯ ಸರ್ಕಾರದ ಪ್ರಮುಖ ಅಥವಾ ಭಾಗಶ: ಒಡೆತನದ ಎಲ್ಲಾ ಸಾರ್ವಜನಿಕ ಉದ್ದಿಮೆಗಳ ಮೂಲಕ ನಡೆಸುವ ಯಾವುದೇ ಇತರೆ ಪರೀಕ್ಷೆ.

(9) ರಾಜ್ಯ ಸರ್ಕಾರವು ಅಧಿಸೂಚಿಸಿದ ಅಥವಾ ರಾಜ್ಯ ಸರ್ಕಾರವು ನೇಮಿಸಿದ ಯಾವುದೇ ಏಜೆನ್ಸಿ ಮೂಲಕ ನಡೆಸುವ ಯಾವುದೇ ಇತರೆ ಪರೀಕ್ಷೆ.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ
## (ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)

ಕರ್ನಾಟಕದ ಸಾರ್ವಜನಿಕ ಪರೀಕ್ಷೆಗಳ ಅಕ್ರಮಗಳು ಹಾಗೂ ಭ್ರಷ್ಟಾಚಾರ ಮತ್ತು ಅನುಚಿತ ವಿಧಾನಗಳ ಬಳಕೆಯು ಮಿತಿ ಮೀರುತ್ತಿದೆ. ಈ ವಿಷಯವು ನೀಚ ವ್ಯಕ್ತಿಗಳಿಗೆ ಹಾಗೂ ನಿಹಿತವಾದ ಹಿತಾಸಕ್ತಿಗಳಿಗೆ ಅಗಾದ ಪ್ರಮಾಣದ ಹಣಕಾಸಿನ ಅನುಕೂಲಗಳನ್ನು ಒಳಗೊಂಡಿರುವುದು ಮಾತ್ರವಲ್ಲದೇ ಕರ್ನಾಟಕದ ಯುವ ಜನತೆಯ ಪ್ರಗತಿಯ ಅವಕಾಶಗಳನ್ನು ಸಹ ಕುಂಠಿತಗೊಳಿಸುತ್ತಿದೆ. ಈ ಅಕ್ರಮ ಜಾಲವು ನ್ಯಾಯ ಸಮ್ಮತ ರೀತಿಯಲ್ಲಿ ಸಾರ್ವಜನಿಕ ಪರೀಕ್ಷೆಗಳನ್ನು ನಡೆಸುವುದನ್ನು ವಿಫಲಗೊಳಿಸಲು ಹೊಸ ಹೊಸ ಭ್ರಷ್ಟ ಮತ್ತು ಅನುಚಿತ ವಿಧಾನಗಳನ್ನು ಬಳಸುವ ಮೂಲಕ ಲಕ್ಷಾಂತರ ಪ್ರತಿಭಾನ್ವಿತ ಮತ್ತು ಕಠಿಣ ಪರಿಶ್ರಮಪಡುವ ಯುವಜನರಿಗೆ ಅವಕಾಶಗಳಿಂದ ವಂಚಿತಗೊಳಿಸುತ್ತಿವೆ.

ರಾಜ್ಯ ಸರ್ಕಾರದ ಅಡಿಯಲ್ಲಿನ ಹುದ್ದೆಗಳ ನೇಮಕಾತಿಯ ವಿಷಯದಲ್ಲಿ ಪ್ರಶ್ನೆಪತ್ರಿಕೆಗಳ ಸೋರಿಕೆಯು ಕೇವಲ ಜನಸಾಮಾನ್ಯರ ನಂಬಿಕೆಗೆ ದ್ರೋಹವಾಗುವುದು ಮಾತ್ರವಲ್ಲದೇ ರಾಜ್ಯವು ಗಣನೀಯವಾದ ಆಡಳಿತಾತ್ಮಕ ವೆಚ್ಚವನ್ನೂ ಸಹ ಅನುಭವಿಸುತ್ತಿದೆ ಮತ್ತು ಪರೀಕ್ಷೆ ನಡೆಸುವಿಕೆಯು ಪ್ರಶ್ನಾರ್ಹವಾದಾಗ ರಾಜ್ಯದ ಗೌರವಕ್ಕೂ ಕೂಡ ಚ್ಯುತಿಯಾಗುತ್ತಿದೆ. ಭಾರತ ಸಂವಿಧಾನದ ಅನುಚ್ಛೇದ 16 (1)ರಡಿಯಲ್ಲಿನ ಸಮಾನ ಅವಕಾಶಗಳ ನಿಯಮಾವಳಿಗಳಿಗೆ ಒಳಪಟ್ಟು, ನ್ಯಾಯ ಸಮ್ಮತ ಹಾಗೂ ನ್ಯಾಯಯುತ ಕಾರ್ಯವಿಧಾನದ ಮೂಲಕ ಹುದ್ದೆಗಳಿಗೆ ಆಯ್ಕೆ ಮಾಡುವುದು ಸಂವಿಧಾನದ ಅಗತ್ಯತೆಯಾಗಿದೆ. ನ್ಯಾಯಯುತ ಹಾಗೂ ನ್ಯಾಯಸಮ್ಮತ ನೇಮಕಾತಿ ಪ್ರಕ್ರಿಯೆಯು 14ನೇ ಅನುಚ್ಛೇದದ ಮೂಲಭೂತ ಅಗತ್ಯವಾಗಿದೆ.

ಆದ್ದರಿಂದ, ಪ್ರಶ್ನೆಪತ್ರಿಕೆಗಳ ಸೋರಿಕೆ ಅಪರಾಧವನ್ನು ಮತ್ತು ಸ್ವಾಯತ್ತ ಸಂಸ್ಥೆಗಳು, ಪ್ರಾಧಿಕಾರಗಳು, ಮಂಡಳಿಗಳು ಅಥವಾ ನಿಗಮಗಳನ್ನು ಒಳಗೊಂಡಂತೆ ರಾಜ್ಯ ಸರ್ಕಾರದಡಿಯಲ್ಲಿನ ಯಾವುದೇ ಹುದ್ದೆಗೆ ನೇಮಕಾತಿ ಉದ್ದೇಶಕ್ಕಾಗಿ ಸಾರ್ವಜನಿಕ ಪರೀಕ್ಷೆಗಳಲ್ಲಿ ಅನುಚಿತ ವಿಧಾನವನ್ನು ಬಳಸುವುದನ್ನು ಪ್ರತಿಬಂಧಿಸಲು ಮತ್ತು ತಡೆಗಟ್ಟಲು ಪರಿಣಾಮಕಾರಿ ಕ್ರಮಗಳನ್ನು ಉಪಬಂಧಿಸಲು ಈ ವಿಧೇಯಕವನ್ನು ಪ್ರಸ್ತಾವಿಸಲಾಗಿದೆ. ಹೊಸ ಕಾನೂನು ಸಾರ್ವಜನಿಕ ಪರೀಕ್ಷೆಯಲ್ಲಿ ಅನುಚಿತ ವಿಧಾನಗಳ ಹೆಚ್ಚಳ ಮತ್ತು ಪ್ರವೃತ್ತಿಯ ವಿರುದ್ಧ ಪ್ರತಿಬಂಧಕ ಕೆಲಸ ಮಾಡುವುದು ಮತ್ತು ಅಂಥ ತಂತ್ರಗಳನ್ನು ಅವಲಂಬಿಸುವ ಪರೀಕ್ಷಾರ್ಥಿಗಳು ಮತ್ತು ಅಪರಾಧಿಕ ಸೂತ್ರದಾರರನ್ನೂ ಸಹ ಪ್ರತಿಬಂಧಿಸುವ ಕೆಲಸ ಮಾಡುವುದು. ಹೊಸ ಕಾನೂನು ಹತ್ತು ವರ್ಷಗಳವರೆಗೆ ದಂಡನೆಯ ಮತ್ತು ಜುಲ್ಮಾನೆಯ ರೂಪದಲ್ಲಿ ಹತ್ತು ಕೋಟಿಗಳವರೆಗಿನ ದಂಡವನ್ನು ಹಾಗೂ ಸ್ವತ್ತುಗಳ ಜಪ್ತಿ ಮತ್ತು ಮುಟ್ಟುಗೋಲು ಹಾಕಿಕೊಳ್ಳುವಂಥ ಕಠಿಣ ಉಪಬಂಧಗಳನ್ನು ಒಳಗೊಂಡಿರುತ್ತದೆ. ಅಂಥ ಅಪರಾಧಗಳ ಅಧಿವಿಚಾರಣೆಗಾಗಿ ನ್ಯಾಯಾಲಯಗಳನ್ನು ಗೊತ್ತುಪಡಿಸುವುದಕ್ಕಾಗಿ ಈ ಕಾನೂನಿನಲ್ಲಿ ಉಪಬಂಧ ಕಲ್ಪಿಸಲಾಗಿದೆ.

ಆದ್ದರಿಂದ, ಈ ವಿಧೇಯಕ.

.

# ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚುವರಿ ವೆಚ್ಚ ಒಳಗೊಂಡಿರುವುದಿಲ್ಲ.

**ಪ್ರತ್ಯಾಯೋಜಿತ ಶಾಸನ ಕುರಿತು ಜ್ಞಾಪನ ಪತ್ರ**

| | |
|---|---|
| ಖಂಡ-23: | ಉಪಖಂಡ(1), ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ವಾಡಿಕೆಯ ಸ್ವರೂಪದ್ದಾಗಿರುತ್ತದೆ.

**ಡಾ.ಜಿ.ಪರಮೇಶ್ವರ**
ಗೃಹಮಂತ್ರಿ

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ಸುವರ್ಣ ವಿಧಾನಸೌಧ, ಬೆಳಗಾವಿ, ಪಿ7, ಕಾಸೂ , ಪ್ರತಿಗಳು 300, 13ನೇ ಡಿಸೆಂಬರ್ 2023

**KARNATAKA LEGISLATIVE COUNCIL**
**ONE HUNDRED AND FIFTY FIRST SESSION**

# THE KARNATAKA PUBLIC EXAMINATION (MEASURES FOR PREVENTION OF CORRUPTION AND UNFAIR MEANS IN RECRUITMENT) BILL, 2023

**(LA Bill No. 21 of 2023)**

**(As passed by the Karnataka Legislative Assembly)**

A Bill to provide for strict and effective measures to curb the use of unfair corrupt means and leakage of question papers at public examinations conducted for the purpose of recruitment to any post in or under the Karnataka State Government including autonomous bodies, authorities, boards or corporations and to provide for designated courts for the trial of such offences;

Whereas it is considered necessary to provide for strict and effective measures to curb the use of unfair, corrupt means and leakage of question papers at public examinations conducted for the purpose of recruitment to any post in or under the Karnataka State Government including autonomous bodies, authorities, boards or corporations, and to provide for designated courts for the trial of such offences and for matters connected therewith or incidental thereto and for the purposes hereinafter appearing;

Be it enacted by the Karnataka State Legislature in the Seventy-fourth Year of the Republic of India, as follows: -

**1. Short title and Commencement.-** (1) This Act may be called the Karnataka Public Examination (Measures for Prevention of Corruption and Unfair Means in Recruitment) Act, 2023.

(2) It shall come into force on such date, as the State Government may, by notification in the Official Gazette, appoint.

**2. Definitions.-** (1) In this Act, unless the context otherwise requires,-

(a) "conduct of public examination" means and includes preparation, printing, supervision, coding, processing, storing, transportation, distribution and collection of question papers, answer sheets, OMR sheets and result sheets, evaluation, declaration of result etc;

(b) "examination authority" means an examination authority as specified in the Schedule-I;

(c) "examination center" means any institution or part thereof or any other place fixed and used for the holding of a public examination and includes the entire premises attached thereto;

(d) "examinee" means a person who has been granted permission by the concerning authority to appear in a public examination, and includes a person authorized to act as scribe on his behalf in public examination;

(e) "public examination" means examination for the purpose of recruitment to any post under the State Government including autonomous bodies, authorities, boards or corporations as specified in the Schedule-II;

(f) "unfair means" includes,-

(i) in relation to an examinee, to take unauthorized help in public examination from any person or group directly or indirectly or from any material written, recorded, copied or printed, in any form whatsoever, or use of any unauthorized electronic or mechanical instrument or gadget;

(ii) in relation to any person including examinee to impersonate or leak or attempt to leak or conspire to leak, to procure or attempt to procure or possess, to solve or attempt to solve or seek assistance to solve question paper in unauthorized manner or directly or indirectly assist the examinee in the public examination in unauthorized manner.

(2) The words and expressions used but not defined, shall have the same meaning assigned to them in the Indian Penal Code, 1860 (Central Act No. 45 of 1860).

**3. Prohibition of use of unfair means.-** No person shall use unfair means at any public examination.

**4. Possession and disclosure of question paper.-** No person who is lawfully authorized by virtue of his duties to conduct public examination shall before the time fixed for opening and distribution of question papers,-

(a) open, leak or procure or attempt to procure, possess or solve such question paper or any portion or a copy thereof; or

(b) give any confidential information or promise to give such confidential information to any person or examinee, where such confidential information is related to or in reference to such question paper.

**5. Prevention of leakage by person entrusted or engaged with examination work.-** No person, who is entrusted or engaged with any work pertaining to public examination shall, except where he is permitted by virtue of his duties so to do, directly or indirectly divulge or cause to be divulged or make known to any other person any information or part thereof which has come to his knowledge by virtue of the work being so entrusted to him.

**6. Unauthorized possession or disclosure of question paper and answer sheet or OMR sheet in any form.-** No person who is lawfully authorized or permitted by virtue of his duties to do so, shall, before the time fixed for the distribution of question papers,-

(a) procure or attempt to procure or possess, such question paper or answer sheet or OMR sheet or any portion or copy thereof in any form; or

(b) impart or offer to impart, such information which he knows or has reason to believe to be related to, or derived from or to have a bearing upon such question paper.

**7. Prohibition to enter in examination center.-** No person who is not entrusted or engaged with the work pertaining to public examination or conduct of public examination or who is not an examinee, shall enter the premises of the examination center.

**8. No place other than examination center shall be used for public examination.-** No person who is entrusted or engaged with the work pertaining to public examination shall use or cause to be used any place, other than the examination center, for the purpose of holding public examination.

**9. Offences by Management, Institution or others.-** (1) Whenever an offence under this Act has been committed by Management or Institution or Limited

Liability Partnership or others, every person who at the time the offence was committed was incharge of, or was responsible to the Management or Institution or Limited Liability Partnership or others for conduct of the business of the Management or Institution or Limited Liability Partnership or others, as well as the Management or Institution or Limited Liability Partnership or others, shall be deemed to be guilty of the offence and shall be liable to be proceeded against and punished accordingly:

Provided that, nothing contained in this sub-section shall render any such person liable to any punishment under this Act if he proves that the offence was committed without his knowledge and that he exercised all due diligence to prevent the commission of such offence.

(2) Notwithstanding anything contained in sub-section (1) where an offence under this Act has been committed by Management or Institution or Limited Liability Partnership or others and it is proved that the offence has been committed with the consent or connivance of, or is attributable to any neglect on the part of, any director, partner, manager, secretary or other officer of the Management or Institution or Limited Liability Partnership or others, such director, partner manager, secretary or other officer shall also be deemed to be guilty of the offence and shall be liable to be proceeded against and punished accordingly.

**10. Penalties.-** (1) If any examinee indulges in unfair means as defined under clause (f) of section 2, shall be liable to be punished with imprisonment of either description for a term which may extend to five years and shall also be liable to fine, which shall not be less than ten lakh rupees and in case of default of payment of fine such examinee shall also be liable to be punished with imprisonment of either description for a term of fifteen months.

(2) If any person, including examinee, whether entrusted or authorized with the conduct of public examination or not, in conspiracy or otherwise indulges or attempts to indulge in unfair means as defined in clause (f) of section 2 or contravenes or abets to contravene any of the provisions of this Act, shall be punished with imprisonment of either description for a term which shall not be less than eight years but which may extend to imprisonment of twelve years and shall also be liable to fine which shall not be less than fifteen lakh rupees but which may extend to ten crore rupees and in case of default of payment of fine such person

shall also be liable to be punished with imprisonment of either description for a term of two years:

Provided that, the Court may for any adequate and special reasons to be recorded in the judgment impose a sentence of imprisonment for a term of less than five years.

**11. Debarment on conviction.-** (1) An examinee who is prima facie found guilty by the examination authority in impersonation or of submitting fabricated document or documents which have been tampered with or of making statements which are incorrect or false, or of suppressing any material information or of using or attempting to use unfair means in the examination hall or otherwise resorting to any other irregular and improper means in connection with any examination, such examinee shall in addition to rendering himself liable to a criminal prosecution, be debarred either permanently or for a specified period by the examination authority from admission to any examination or appearance at any interview or examination held by the examination authority.

(2) An examinee who has been convicted of an offence under the provision of this Act shall be debarred from taking any public examination for a period of two years.

**12. Attachment and confiscation of property.-** (l) No person shall hold or be in possession of any proceeds of any offence under this Act.

(2) If an officer, investigating an offence committed under this Act, has reason to believe that any property represents proceeds of any offence under this Act, he shall, with the prior approval in writing of the State Government make an order seizing such property, movable or immovable or both, and where it is not practicable to seize such property, make an order of attachment directing that such property shall not be transferred or otherwise dealt with except with the prior permission of the officer making such order or, as the case may be, the Designated Court and a copy of such order shall be served on the person concerned.

(3) The investigating officer shall duly inform the Designated Court, within forty-eight hours of the seizure or attachment of such property.

(4) It shall be open to the Designated Court either to confirm or revoke the order of seizure or attachment made under sub-section (2):

Provided that, the Designated Court shall not pass an order unless an opportunity of making representation is given to the person whose property is being attached.

(5) Where the accused has been convicted of any offence punishable under this Act, the Designated Court may, in addition to awarding any punishment, by order in writing, declare that any property, movable or immovable or both belonging to the accused and specified in the order shall stand confiscated to the State Government free from all encumbrances.

**Explanation.-** For the purpose of this section "proceeds of any offence under this Act" means all kind of properties which have been derived or obtained from commission of any offence under this Act or have been acquired through funds traceable to any offence under this Act and shall include cash, irrespective of person in whose name such proceeds are standing or in whose possession they are found.

**13. Liability of Management etc., to pay all cost and expenditure.-** If the person of the Management or Institution or Limited Liability Partnership or others has been found guilty of the offence under sub-section (2) of section 10 of this Act, the Management or Institution or Limited Liability Partnership or others shall be liable to pay all cost and expenditure related to the examination, determined by the Designated Court and shall be banned forever.

**14. Offences to be Cognizable, non-bailable and non-compoundable.-** All offences specified under this Act, shall be cognizable, non-bailable and non-compoundable.

**15. Investigation of the offences.-** No police officer below the rank of Additional Superintendent of Police shall investigate any offence committed under this Act.

**16. Cases triable by Designated Courts.-** Without prejudice to the provisions of the Code of Criminal Procedure, 1973 (Central Act No. 2 of 1974), or in any other law for the time being in force, the offences specified under this Act shall be tried by the courts designated under this Act.

**17. Power to appoint Designated Courts.-** The State Government may, by notification in the Official Gazette, designate as many Courts of Sessions in

consultation with the Chief Justice of the High Court of Karnataka as it may be necessary to try offences punishable under this Act.

**18. Power to give directions.-** The Government or any officer or authority specifically empowered by the Government by order in this behalf may give directions to any educational institution or tutorial institution or any officer, or other person to give effect to any of the provisions of this Act or any rule or order made thereunder and such directions shall be complied with.

**19. Protection of action taken in good faith**.- No suit, prosecution or other legal proceedings shall lie against the Government or any officer or authority of Government or any other person for anything which is in good faith done or intended to be done under this Act or the rules or orders made thereunder.

**20. Act not in derogation of any other law.-** The provisions of this Act shall be in addition to and not in derogation of the provisions of any other law for the time being in force.

**21. Power to amend Schedule.-** The State Government by notification published in the Official Gazette may amend schedules of the Act to add New Examination Authority or Public Examination and may by like notification amend or very the entries of the schedules.

**22. Power to remove difficulties.-** (1) If any difficulty arises in giving effect to the provisions of this Act, the State Government may, by order, published in Official Gazette, make such provisions not inconsistent with the provisions of this Act as may appear to be necessary for removing the difficulty:

Provided that no such order shall be made under this section after the expiry of two years from the commencement of this Act.

(2) Every order made under this section shall be laid, as soon as may be after it is made, before the Houses of the State Legislature.

**23. Power to make rules.-** (1) The State Government may make rules for carrying out the purposes of this Act.

(2) Every rule made under this Act shall be laid as soon, as may be after it is made before each House of the State Legislature while it is in session for a total period of thirty days which may be comprised in one session or in two or more

successive sessions, and if, before the expiry of the session immediately following the session or the successive sessions aforesaid, both Houses agree in making any modification in the rule or both Houses agree that the rule should not be made, the rule shall thereafter have effect only in such modified form or be of no effect, as the case may be, so however, that any such modification or annulment shall be without prejudice to the validity of anything previously done under that rule.

**SCHEDULE-I**

**(Section 2(b))**

(1) Karnataka Public Service Commission

(2) Karnataka Examination Authority (KEA)

(3) All other authority or agency or recruitment committee engaged or constituted by the State Government

(4) State Funded Universities

(5) Karnataka School Examination and Evaluation Board

(6) Karnataka Police Recruitment and Promotion Board

(7) Public Sector Undertaking owned by State Government

(8) Any Societies, Corporations, Local Bodies and all PSUs owned by the State Government substantially or partially

(9) Any other authority notified by State Government

**SCHEDULE-II**

**[Section 2(e)]**

(1) Any examination conducted by the Karnataka Public Service Commission.

(2) Any examination conducted by the Karnataka Examination Authority (KEA)

(3) Any examination conducted by any other authority or agency or recruitment committee engaged or constituted by the State Government.

(4) Any recruitment examination conducted by the State Funded Universities.

(5) Any recruitment examination conducted by the Karnataka School Examination and Evaluation Board

(6) Any examination conducted by the Karnataka Police Recruitment and Promotion Board..

(7) Any examination conducted by the Public Sector Undertaking owned by State Government.

(8) Any other examination conducted by any Societies, Corporations, Local Bodies and all PSU's owned by State Government substantially or partially.

(9) Any other examination notified by the State Government or conducted by any agency appointed by the State Government.

**STATEMENT OF OBJECTS AND REASONS**

**(As appended to at the time of introduction)**

There are rampant irregularities, as well as use of corrupt and unfair means in public examinations in Karnataka. The issue not only involves huge pecuniary advantages to nefarious persons and vested interests, but also undermines opportunities of advancement for Karnataka's youth. Lakhs of meritorious and hardworking youth are denied opportunities because of this nexus which uses new corrupt and unfair means to defeat the conduct of public examinations in a fair manner.

In matter of recruitment to the posts under the State Government the leakage of question papers not only betrays the trust of the general public but the State too suffers substantial administrative costs and loss of prestige when the conduct of examinations comes under question. A fair and reasonable process of selection to posts, subject to the norm of equality of opportunity under Article 16 (1) of the Constitution of India, is a constitutional requirement. A fair and reasonable recruitment process is a fundamental requirement of Article 14 as well.

Therefore, this Bill has been proposed to provide for effective measures to prevent and curb the offences of leakage of question papers and use of unfair means at public examinations for the purpose of recruitment to any post under the State Government including autonomous bodies, authorities, boards or corporations. The new law will work as deterrent against the rise and trend of unfair means in public examinations and also work as deterrent for the examinees and criminal masterminds who resort to such tactics. The new law has strict provisions of punishment up to ten years and penalties in the form of fine up to ten crore rupees as well as of attachment and confiscation of property. A designated court for the trial of such offences is provisioned in this law.

Hence, the Bill.

## FINANCIAL MEMORANDUM

There is no extra expenditure involved in the proposed legislative measure.

**MEMORANDUM REGARDING DELEGATED LEGISLATION**

| | |
|---|---|
| Clause-23 | Sub-clause (1), empowers the State Government to make rules for carrying out the purposes of the Act. |

The proposed delegation of legislative power is normal in character.

**Dr. G. PARAMESHWARA**
Minister for Home

**K.R. MAHALAKSHMI**
Secretary
Karnataka Legislative Council

Govt. Press, Suvarna Vidhana Soudha, Belgavi, 13TH Dec, 2023, P7, W.D. , Copies 300